ಪೋಷಕರೇ, ಗಮನಿಸಿ

ಹದಿಹರೆಯದ ಮಕ್ಕಳ ನಿಯಂತ್ರಣ

(ಹಿಂದಿನ ಸಂಚಿಕೆಯಲ್ಲಿ: ೧. ನಿಮ್ಮ ಮಗು ಈಗ ಬೆಳೆದು ನಿಂತಿದ್ದಾನೆ/ಳೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ. ೨. ಮನೋವೈದ್ಯರನ್ನು ಸಂದರ್ಶಿಸಿರಿ.)

೩. ನಿಮ್ಮ ಮಕ್ಕಳನ್ನು ಅರ್ಥಮಾಡಿಕೊಳ್ಳುವಲ್ಲಿ ಸಹನೆ ತೋರಿಸಿ: ಹದಿಹರೆಯವೆಂಬುದು ಮುಂದಿನ ಬಾಳು ರೂಪುಗೊಳ್ಳುವ ಘಟ್ಟ. ಈ ಕಾಲದಲ್ಲಿ ಮಕ್ಕಳು ತಮ್ಮ ಭವಿಷ್ಯದ ಬಗ್ಗೆ ತಮ್ಮದೇ ಆದ ನಿಲುವುಗಳನ್ನು ಹೊಂದಿರುತ್ತಾರೆ. ಹೀಗಾಗಿ ಈ ಬಗೆಯ ಅಭಿಪ್ರಾಯಗಳನ್ನು ಶಾಂತಭಾವದಿಂದ ಕೇಳಿಸಿಕೊಳ್ಳಿ. ಈ ಅನಿಸಿಕೆಗಳನ್ನು ನೀವು ಸಕಾರಾತ್ಮಕ ಭಾವದಿಂದ ಆಲಿಸುತ್ತಿದ್ದೀರಿ ಎಂಬ ಭಾವವು ಮಕ್ಕಳ ಮನಸ್ಸಿನಲ್ಲಿ ಮೂಡುವಂತೆ ನೋಡಿಕೊಳ್ಳಿ. ಮಕ್ಕಳು ಆಸಕ್ತಿ ವಹಿಸುವ ವಿವಿಧ ಕ್ಷೇತ್ರಗಳ ಬಗ್ಗೆ ಇತ್ತೀಚಿನ ಮಾಹಿತಿಯನ್ನು ಪಡೆದುಕೊಳ್ಳಿ. ಅವು ಮಕ್ಕಳ ಮನಸ್ಸನ್ನು ಹೇಗೆ ರೂಪಿಸುತ್ತಿವೆ ಎಂಬುದನ್ನು ಅರಿತುಕೊಳ್ಳಿ. ಆ ವಿಷಯಗಳ ಬಗ್ಗೆ ಸ್ನೇಹಿತನಂತೆ ಮಕ್ಕಳ ಜೊತೆಯಲ್ಲಿ ಮುಕ್ತವಾಗಿ ಚರ್ಚಿಸಿರಿ. ಇವು ಮಕ್ಕಳಲ್ಲಿ ನಿಮ್ಮ ಬಗ್ಗೆ ಇರಬಹುದಾದ ಹಿಂಜರಿಕೆಯನ್ನು ಎಷ್ಟೋ ಕಡಮೆ ಮಾಡುತ್ತದೆ. ಅವರು ತಮ್ಮ ಸಮಸ್ಯೆಗಳನ್ನು ನಿಮ್ಮ ಮುಂದೆ ಮುಕ್ತವಾಗಿ ತೋಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡುತ್ತದೆ. "ನಾವು ಎದುರಿಸಬೇಕಾದ ವರ್ತಮಾನದ ಹಲವು ಸವಾಲುಗಳ ಬಗ್ಗೆ ನಮ್ಮ ತಂದೆತಾಯಿಗಳಿಗೆ ಅರಿವು ಸಾಕಷ್ಟಿದೆ" ಎಂಬುದು ಅವರಿಗೆ ಮನದಟ್ಟಾಗುತ್ತದೆ. ಇದರಿಂದ ನೀವು ಹೇಳುವ ಸಂಗತಿಗಳು ಪ್ರಸ್ತುತ ಕಾಲಕ್ಕೆ ಅನ್ವಯವಾಗುತ್ತವೆ ಎಂಬ ಭಾವನೆ ಅವರಿಗೆ ಬರುತ್ತದೆ. ಆಮೂಲಕ ನಿಮ್ಮಲ್ಲಿ ವಿಶ್ವಾಸ ಮತ್ತು ನಂಬಿಕೆ ಮೂಡುವಂತೆಯೂ ಆಗುತ್ತದೆ.

೪. ನಿಮ್ಮ ಮಕ್ಕಳ ಫೇಸ್‌ಬುಕ್ ಅಥವಾ ಟ್ವಿಟರ್ ಸಂಪರ್ಕವನ್ನು ಹೊಂದಿರಿ : ಇದರಿಂದ ನಿಮ್ಮ ಮಕ್ಕಳ ದೈನಂದಿನ ಚಟುವಟಿಕೆಗಳ ಬಗ್ಗೆ ನೀವು ನಿಗಾ ಇರಿಸಿದಂತೆ ಆಗುತ್ತದೆ. ನಿಮ್ಮ ಮಕ್ಕಳು ತಮ್ಮ ಸ್ನೇಹಿತರೊಡನೆ ನಡೆಸುವ ಆನ್‌ಲೈನ್ ಚರ್ಚೆಗಳಲ್ಲಿ ನೀವೂ ಭಾಗವಹಿಸಿ. ಅವುಗಳ ದಿಕ್ಕನ್ನು ಸರಿಪಡಿಸಬೇಕೆಂದು ನಿಮಗೆ ಅನ್ನಿಸಿದರೆ, ಸ್ನೇಹಭಾವದಿಂದ ಅದಕ್ಕೆ ಸಲಹೆ ನೀಡಿ. ಇದರಿಂದ ಮಕ್ಕಳೇನೂ ಬೇಜಾರು ಮಾಡಿಕೊಳ್ಳುವುದಿಲ್ಲ.

೫. ಮಕ್ಕಳಲ್ಲಿ ಅಡಗಿರುವ ಸೃಜನಾತ್ಮಕ ಶಕ್ತಿಯನ್ನು ಮತ್ತು ಉದ್ಯೋಗಶೀಲತೆಯನ್ನು ಪ್ರೋತ್ಸಾಹಿಸಿ : ನಿಮ್ಮ ಮಕ್ಕಳು ತಮ್ಮಲ್ಲಿರುವ ಹಲವಾರು ರೀತಿಯ ಪ್ರತಿಭೆಗಳನ್ನು ಪ್ರಕಟಿಸಲು ವಿವಿಧರೀತಿಯ ಅವಕಾಶಗಳಿಗಾಗಿ ಮತ್ತು ಉತ್ತೇಜನಕ್ಕಾಗಿ ಹಾತೊರೆಯುತ್ತಿರುತ್ತಾರೆ ಎನ್ನುವುದನ್ನು ನೆನಪಿಡಿ. ಅವರಲ್ಲಿ ಹುದುಗಿರುವ ಸುಪ್ತ ಸಾಮರ್ಥ್ಯಗಳು ಮೇಲಕ್ಕೆ ಬರುವ ಸರಿಯಾದ ಮಾರ್ಗವನ್ನು ಅವರಿಗೆ ತೋರಿಸಿಕೊಡಿ. ಆ ಶಕ್ತಿಯ ಸಂಚಾಲನೆಯನ್ನು ಹೆಚ್ಚುಮಾಡುವುದಕ್ಕಾಗಿ ಎಲ್ಲಕಾಲಕ್ಕೂ ಪ್ರೀತಿಯೊಡಗೂಡಿದ ಪ್ರೋತ್ಸಾಹವನ್ನು ತಪ್ಪದೆ ನೀಡಿ. ಬರವಣಿಗೆ, ಲಲಿತಕಲೆ, ಕರಕುಶಲತೆ – ಹೀಗೆ ಹತ್ತುಹಲವು ಸೃಜನಾತ್ಮಕ ಕಾರ್ಯಗಳಲ್ಲಿ ಅವರು ತೊಡಗಿಸಿಕೊಳ್ಳಲು ನಿಮ್ಮ ಕೈಲಾದಷ್ಟು ಸಹಕಾರ ನೀಡಿ. ಹಾಗೆಯೇ ಅವರ ಸ್ವತಂತ್ರಭಾವನೆಯನ್ನೂ, ಉದ್ಯೋಗಶೀಲತೆಯನ್ನೂ ಮನಸಾರೆ ಪ್ರಶಂಸಿಸಿ, ಅದಕ್ಕೆ ಬೇಕಾದ ಒತ್ತಾಸೆಯನ್ನು ನೀಡಿ. ತಮ್ಮ ಕೆಲಸಗಳಲ್ಲಿ ಮಕ್ಕಳು ಕಾಣುವ ಅಲ್ಪಸ್ವಲ್ಪ ಯಶಸ್ಸಿಗೂ ಅವರನ್ನು ಹೊಗಳಿರಿ. ಮಕ್ಕಳು ಯಾವುದೇ ಕಾರಣಕ್ಕಾಗಿ ಕೆಲವೊಮ್ಮೆ ವಿಫಲರಾದಾಗ, ಅವರಲ್ಲಿ ಆತ್ಮವಿಶ್ವಾಸವನ್ನೂ ಧೈರ್ಯವನ್ನೂ ತುಂಬಿ. ಈ ಬಗೆಯ ಸಕಾರಾತ್ಮಕವಾದ ಧೋರಣೆ ಖಂಡಿತ ಮಕ್ಕಳಲ್ಲಿ ಮಹತ್ವದ ಮಾರ್ಪಾಡುಗಳನ್ನು ಉಂಟುಮಾಡುತ್ತದೆ. ಅವರು ಹಿಂದೆಂದಿಗಿಂತಲೂ ನಿಮಗೆ ಹತ್ತಿರವಾಗುತ್ತಾರೆ.

೬. ತಮ್ಮ ಆಯ್ಕೆಯ ಉದ್ಯೋಗವನ್ನು ಕೈಗೊಳ್ಳುವಲ್ಲಿ ಮಕ್ಕಳಿಗೆ ಸರಿಯಾದ ಮಾಹಿತಿಯನ್ನು ಮತ್ತು ಮಾರ್ಗದರ್ಶನವನ್ನು ನೀಡಿರಿ: ಈ ವಯಸ್ಸಿನಲ್ಲಿ ಮಕ್ಕಳು ತಾವು ಕೈಗೊಳ್ಳಲು ಇಚ್ಛಿಸುವ ಉದ್ಯೋಗದ ಬಗ್ಗೆ ತಮ್ಮದೇ ಆದ ಕನಸುಗಳನ್ನು ಮತ್ತು ತಪ್ಪುಕಲ್ಪನೆಗಳನ್ನು ಹೊಂದಿರುತ್ತಾರೆ. ಸರಿಯಾದ ಸ್ನೇಹಶೀಲ ಮಾರ್ಗದರ್ಶನದ ಮೂಲಕ ಅವರ ತಪ್ಪುಕಲ್ಪನೆಗಳನ್ನು ನಿವಾರಿಸುವುದು ಪ್ರತಿಯೊಬ್ಬ ಪೋಷಕರ ಕರ್ತವ್ಯ. ಅವರು ಆರಿಸಿಕೊಂಡಿರುವ ಉದ್ಯೋಗದ ಸಾಧಕ–ಬಾಧಕಗಳ ಬಗ್ಗೆ ಸರಿಯಾದ ಮಾಹಿತಿಯನ್ನು ಒದಗಿಸಿರಿ. ಇಷ್ಟಾಗಿಯೂ ಅವರು ತಮ್ಮ ಇಚ್ಛೆಯಂತೆ ನಡೆದರೆ, ಆ ದಾರಿಯಲ್ಲಿ ಮುನ್ನಡೆಯಲು ಮಕ್ಕಳು ತಮ್ಮೆಲ್ಲ ಪ್ರಯತ್ನಗಳನ್ನೂ ಮಾಡುತ್ತಾರೆಂಬ ವಿಶ್ವಾಸವನ್ನು ಹೊಂದಿ, ಅವರಿಗೆ ಶುಭವನ್ನು ಹಾರೈಸಿರಿ.

೭. ನಿಮ್ಮ ಹದಿಹರೆಯದ ಮಕ್ಕಳ ಹಣದ ಅಗತ್ಯವನ್ನು ಪೂರೈಸಿ: ನಿಮ್ಮ ಮಕ್ಕಳಿಗೆ ಎಷ್ಟು ಹಣ ಅವಶ್ಯಕ ಎನ್ನುವುದನ್ನು ಸರಿಯಾಗಿ ನಿರ್ಧರಿಸಿ, ಅದನ್ನು ಪೂರೈಸುವುದು ಬಹಳ ಮುಖ್ಯವಾದುದು. ಮಕ್ಕಳ ಅಗತ್ಯಗಳ ಬಗ್ಗೆ ನಿಮ್ಮ ದೃಷ್ಟಿಕೋನವು ತುಂಬ ಸಂಪ್ರದಾಯ ಬದ್ಧವಾಗಿರಬಹುದು; ಅವರ ದೃಷ್ಟಿಕೋನವು, ಅವಶ್ಯಕ್ಕಿಂತ ತುಂಬ ಹೆಚ್ಚು ಕ್ರಾಂತಿಕಾರಕವಾಗಿರಬಹುದು. ಈ ಎರಡಕ್ಕೂ ಮಧ್ಯವಿರುವ ಮಾರ್ಗವನ್ನು ನೀವು ತಳೆಯುವುದು ಒಳ್ಳೆಯದು. ಅದು ಇಬ್ಬರಿಗೂ ಒಪ್ಪಿಗೆಯಾಗುವಂತಿರಬೇಕು. ಹಣದ ಕೊರತೆಯುಂಟಾದರೆ, ಮಕ್ಕಳು ಅನ್ಯಾಯದ ದಾರಿಗೆ ಹೋಗುವ ಅಪಾಯ ಇದ್ದೇ ಇರುತ್ತದೆ. ಹಾಗೆಯೇ, ಹಣ ಹೆಚ್ಚಾದರೆ ಅನಗತ್ಯ ಖರ್ಚುಮಾಡುವ ಹವ್ಯಾಸವನ್ನು ಪ್ರೋತ್ಸಾಹಿಸಿದಂತಾಗುತ್ತದೆ. ಆದ್ದರಿಂದ ಮಕ್ಕಳಿಗೆ ತಮ್ಮ ಖರ್ಚುವೆಚ್ಚಗಳ ಯೋಜನೆಯನ್ನು (Budget) ಮಾಡಿಕೊಳ್ಳುವ ಮತ್ತು ಅಷ್ಟರೊಳಗೆ ಖರ್ಚುವೆಚ್ಚಗಳನ್ನು ನಿಯಂತ್ರಿಸಿಕೊಳ್ಳುವ ಅಭ್ಯಾಸವನ್ನು ಮಾಡಿಸುವುದು ಒಳ್ಳೆಯದು.